ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು
ಎಂ.ಎ.ಸಿ.ಟಿ., ಮಳವಳ್ಳಿ

ಎಂ.ವಿ.ಸಿ. ಸಂಖ್ಯೆ 505/2024

ಅರ್ಜಿದಾರರು : ಈರಲಿಂಗ ಮತ್ತು ಇತರರು

-ವಿರುದ್ಧ-

ಎದುರುದಾರರು : ಸ್ವಾಮಿ ಮತ್ತು ಇನ್ನೊಬ್ಬರು

ಅರ್ಜಿದಾರರ ಪರ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ

ಹೆಸರು : ಗೌರಮ್ಮ

PW2-

ಗಂಡನ ಹೆಸರು : ನಿಂಗರಾಜು

ವಯಸ್ಸು : 52 ವರ್ಷಗಳು

ವೃತ್ತಿ : ಕೂಲಿ

ವಾಸ : ಹುಚ್ಚೇಗೌಡನದೊಡ್ಡಿ
ಮಳವಳ್ಳಿ ತಾಲ್ಲೂಕು

ಆದ ನಾನು ಈ ಪ್ರಕರಣದಲ್ಲಿ ಸಾಕ್ಷಿದಾರಳಾಗಿದ್ದು, ನಾನು ಈ ಘನ ನ್ಯಾಯಾಲಯದಲ್ಲಿ ಪ್ರಮಾಣಪೂರ್ವಕವಾಗಿ ಹೇಳುವುದೇನೆಂದರೆ,

ದಿನಾಂಕ 23-09-2023 ರ ಬೆಳಿಗ್ಗೆ ಸುಮಾರು 9.30 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ಗ್ರಾಮದ ಇತರರು ಹುಸ್ಕೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಕೆಲಸಕ್ಕೆ ಎ.ಜಿ.ಸಿ. ಹುಲ್ಲೇಗಾಲ ಗ್ರಾಮದ ಸೂಲಗುಡ್ಡ ಹತ್ತಿರ ಮಣ್ಣು ಮತ್ತು ನೀರು ಸಂರಕ್ಷಣೆ ಮಾಡುವ ಕೆಲಸಕ್ಕಾಗಿ ಸಲಕರಣೆಗಳ ಜೊತೆಯಲ್ಲಿ ಟಾಟಾ ಎಸ್ ಗೂಡ್ಸ್ ವಾಹನ ನೋಂದಣಿ ಸಂಖ್ಯೆ ಕೆ.ಎ.-01-ಎಜಿ-6251ರಲ್ಲಿ ಹೋಗುತ್ತಿದ್ದು, ಟಾಟಾ ಎಸ್ ಗೂಡ್ಸ್ ಚಾಲಕ ತನ್ನ

ಹತ್ತಿರ ತನ್ನ ವಾಹನವನ್ನು ನಿಯಂತ್ರಿಸಲಾಗದೆ, ರಸ್ತೆಯ ಬಲಭಾಗಕ್ಕೆ ಮೊಗಚಿಕೊಂಡಿತು. ಇದರ ಪರಿಣಾಮವಾಗಿ ನನ್ನನ್ನೂ ಸೇರಿದಂತೆ ಗೂಡ್ಸ್ ವಾಹನದ ಒಳಗೆ ಇದ್ದಂತಹ ಎಲ್ಲರೂ ಕೆಳಗೆ ಬಿದ್ದ ಪರಿಣಾಮ ಎಲ್ಲರಿಗೂ ತೀವ್ರತರನಾದ ಪೆಟ್ಟುಗಳು ಬಿದ್ದವು.

ನನ್ನ ಗ್ರಾಮದವರೇ ಆದ ಈರಲಿಂಗನವರ ಪತ್ನಿ ಪದ್ಮರವರು ನಮ್ಮ ಜೊತೆಯಲ್ಲಿಯೇ ಕೂಲಿ ಕೆಲಸಕ್ಕಾಗಿ ನಮ್ಮ ಗೂಡ್ಸ್ ವಾಹನದಲ್ಲಿಯೇ ಬರುತ್ತಿದ್ದು, ಆಕೆಯ ತಲೆಗೆ ಹಾಗೂ ದೇಹದ ಇತರೇ ಭಾಗಗಳಿಗೆ ತೀವ್ರತರನಾದ ರಕ್ತಸಿಕ್ತಗಾಯಗಳು ಉಂಟಾಗಿದ್ದವು. ಆಕೆಯನ್ನು ಮಂಡ್ಯದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾದೆ ಮೃತ ಹೊಂದಿರುತ್ತಾರೆ ಎಂದು ನನಗೆ ತಿಳಿದು ಬಂದಿದೆ.

ಈ ಅಪಘಾತವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಈ ಸಂಬಂಧ ಪೊಲೀಸ್‌ರವರಿಗೆ ದೂರನ್ನೂ ಸಹ ನೀಡಿರುತ್ತೇನೆ. ಈ ಅಪಘಾತವು ಮೇಲ್ಕಂಡ ಗೂಡ್ಸ್ ವಾಹನ ಚಾಲಕನ ಅತಿವೇಗ, ಅಜಾಕರೂಕತೆ, ನಿರ್ಲಕ್ಷ್ಯತೆಯಿಂದ ಚಾಲನೆ ಮಾಡಿಕೊಂಡು ಬಂದು, ತನ್ನ ವಾಹನವನ್ನು ನಿಯಂತ್ರಿಸಲಾಗದೆ, ರಸ್ತೆಯ ಬಲಬದಿಗೆ ಮೊಗಚಿಕೊಂಡ ಪರಿಣಾಮದಿಂದ ಉಂಟಾಗಿದೆ.

ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸಿನವರಿಗೆ ಹೇಳಿಕೆ ನೀಡಿರುತ್ತೇನೆ.

ಈ ಮೇಲ್ಕಂಡ ಅಂಶಗಳು ಸತ್ಯವಾಗಿದೆ.

ಗುರುತಿಸುವವರು

ವಕೀಲರು

13-11-2025

ಮಳವಳ್ಳಿ

ಪ್ರಮಾಣೀಕರಿಸುವವರು

NOTARY
GOVT. OF KARNATAKA

SWORN TO BEFORE ME

13/11/25

M. BASAVAR...

ADVOCATE ...

Malavalli 57...

Mandya Dis...